# ಫೈಬ್ರಾಯಿಡ್ ಗಡ್ಡೆಗಳಿಂದ ಗರ್ಭಕೋಶ ಕಳೆದುಕೊಳ್ಳುವ ಭಯ ಬೇಡ

– ಡಾ. ಬಿ. ರಮೇಶ್



ಗರ್ಭಕೋಶದ ಸ್ನಾಯು ಪದರದಿಂದ ಫೈಬ್ರಾಯಿಡ್ (Fibroids) ಗಡ್ಡೆಗಳು ಉಂಟಾಗುತ್ತವೆ. ಆದರೆ ಇದೊಂದು ವಾಸಿ ಮಾಡಬಹುದಾದ ಕಾಯಿಲೆ. ಸಂತಾನೋತ್ಪತ್ತಿ ಕಾಲದಲ್ಲಿ ಅನೇಕ ಮಹಿಳೆಯರಲ್ಲಿ ಫೈಬ್ರಾಯಿಡ್ ಗಡ್ಡೆಗಳು ಕಾಣಿಸಬಹುದು. ಮುಖ್ಯವಾಗಿ, ವಂಶಾವಳಿ ಕಾರಣದಿಂದ, ಅಂದರೆ ತಾಯಿಯಿಂದ ಮಗಳಿಗೆ ಫೈಬ್ರಾಯಿಡ್ ಗಡ್ಡೆಗಳು ಮರುಕಳಿಸುವ ಸಾಧ್ಯತೆಯಿದೆ, ಸುಮಾರು 30–35 ವಯಸ್ಸಿನ ಈ ಕಾಯಿಲೆಯ ಸಮಸ್ಯೆ ಎದುರಾಗುವುದು ಹೆಚ್ಚು. ಈ ಸಂದರ್ಭದಲ್ಲಿ ಮಹಿಳೆ ಅಗತ್ಯ ಚಿಕಿತ್ಸೆ ಮಾಡಿಸಿಕೊಳ್ಳುವುದು ಅಗತ್ಯ.

ಫೈಬ್ರಾಯಿಡ್ ಗಡ್ಡೆಗಳು ನೋಡಲಿಕ್ಕೆ ದುಂಡನಾಗಿರುತ್ತವೆ. ಇತ್ತೀಚೆಗೆ ಬೆಂಗಳೂರಿನ ಮಹಿಳೆಯೊಬ್ಬರ ಗರ್ಭಕೋಶದಲ್ಲಿದ್ದ ಒಂದೂವರೆ ಕೆ.ಜಿ. ತೂಕದ ಗಡ್ಡೆಗಳನ್ನು ನಮ್ಮ ಆಸ್ಪತ್ರೆಯಲ್ಲಿ ಐದು ಗಂಟೆಗಳ ದೀರ್ಘ ಅವಧಿಯ ಶಸ್ತ್ರ ಚಿಕಿತ್ಸೆ ಮೂಲಕ ತೆಗೆಯಲಾಗಿದೆ. ವಿಚಿತ್ರವೆಂದರೆ ಅತಿ ಸಣ್ಣ ಗಡ್ಡೆಯಿಂದ ಹಿಡಿದು ಚೆಂಡಿನ ಗಾತ್ರದ ಗಡ್ಡೆಗಳೂ ಕಾಣಿಸಬಹುದು. ಗಡ್ಡೆಗಳು ಬೆಳೆಯುತ್ತ ಗರ್ಭಕೋಶದಿಂದ ಹೊರಚಾಚುತ್ತವೆ. ಹಾಗೇ ಜೋತು ಬೀಳುತ್ತವೆ. ಗಡ್ಡೆಯನ್ನು ಶಸ್ತ್ರ ಚಿಕಿತ್ಸೆ ಮೂಲಕ ತೆಗೆದಾಗ ಗಡ್ಡೆಗಳು ಯಾವುದೇ ಆಕಾರದಲ್ಲಿ ಕಾಣಿಸುತ್ತವೆ.

## ಲಕ್ಷಣಗಳು

ಮುಟ್ಟಿನ ದಿನಗಳಲ್ಲಿ ಅಧಿಕ ಋತುಸ್ರಾವವಾಗುತ್ತದೆ. ಕೆಂಪುರಕ್ತ ಕಣಗಳು ಸಾಕಷ್ಟು ಕುಗ್ಗುತ್ತವೆ. ಹತ್ತಾರು ದಿನಗಳ ಕಾಲ ಹೀಗೆ ಮುಂದುವರಿಯುವ ಸಾಧ್ಯತೆ ಇರುತ್ತದೆ. ಇದರಿಂದ ಒಂದು ಮುಟ್ಟಿಗೂ ಇನ್ನೊಂದು ಮುಟ್ಟಿಗೂ ವ್ಯತ್ಯಾಸವಾಗುತ್ತದೆ. ಸೋಂಕು ಉಂಟಾದಲ್ಲಿ ಕೀವು, ಬಿಳಿಸ್ರಾವ ಹಾಗೂ ರಕ್ತ ಮಿಶ್ರಿತ ಸ್ರಾವ ಉಂಟಾಗಬಹುದು. ಮುಖ್ಯವಾಗಿ, ಸಂಭೋಗದಲ್ಲಿ ತೀವ್ರವಾದ ನೋವು ಕಾಣಿಸುತ್ತದೆ. ಮೂತ್ರ ಮಾಡಲಿಕ್ಕಾಗದಿರುವಿಕೆ, ಮಲ ವಿಸರ್ಜನೆಗೆ ಅಡ್ಡ; ಹೀಗೆ ಹಲವಾರು ತೊಂದರೆಗಳು ಎದುರಾಗುತ್ತವೆ. ಜೊತೆಗೆ ಸದಾಕಾಲ ಯಾತನೆ, ಗರ್ಭಧರಿಸಲು ತೊಂದರೆಯಾಗುವುದು, ಹಾಗೂ ಬೆನ್ನುನೋವು ಅತಿಯಾಗಿ ಕಾಣಿಸುವುದು.

## ರೋಗ ಪತ್ತೆ ಹೇಗೆ?

ಹೊಟ್ಟೆಯಲ್ಲಿ ಗಡ್ಡೆಗಳು ಇದ್ದ ಪಕ್ಷದಲ್ಲಿ ಅದುಮಿದಾಗ ಗಟ್ಟಿ ಅನುಭವ ಬಂದರೆ, ಮತ್ತು ಮುಟ್ಟಿನ ಸಂದರ್ಭದಲ್ಲಿ ಅಧಿಕ ಋತುಸ್ರಾವ ಉಂಟಾದರೆ ಅದು ನಾರುಗಡ್ಡೆ ಎಂದು ವೈದ್ಯರು ಸಾಮಾನ್ಯವಾಗಿ ನಿರ್ಧಾರ ಮಾಡುತ್ತಾರೆ. ಉದರ ಪರೀಕ್ಷೆ, ಸ್ಕ್ಯಾನಿಂಗ್ ಹಾಗೂ ಗರ್ಭಕೋಶ ದರ್ಶಕಗಳ ಸಹಾಯದಿಂದ ತಿಳಿಯಲಾಗುತ್ತದೆ. ನಂತರ ಸ್ತ್ರೀರೋಗ ತಜ್ಞರು ರೋಗಿಯ ಮುಟ್ಟಿನ ವಿವರ, ಉದರದ ನೋವಿನ ಪ್ರಮಾಣ, ಹಾಗೂ ಮಗುವನ್ನು ಹೊಂದುವ ಅಭಿಲಾಷೆ ರೋಗಿಗೆ ಸದ್ಯಕ್ಕೆ ಇದೆಯೇ ಎಂಬುದನ್ನು ಅರಿತು ಚಿಕಿತ್ಸೆಯ ನಿರ್ಧಾರವನ್ನು ಮಾಡುತ್ತಾರೆ. ಹಾಗೆ ಪೆಲ್ವಿಕ್ ಪರೀಕ್ಷೆಯನು ಮಾಡುವುದು ಅಗತ್ಯ. ಈ ಸಂದರ್ಭದಲ್ಲಿ ಸಂತಾನೋತ್ಪತಿ ಅರ್ಗನ್ಸ್ ಪರೀಕ್ಷೆ, ಗರ್ಭಕೋಶದ ಸ್ಥಿರತೆಯನ್ನು ಕೂಡಾ ತಿಳಿಯಲಾಗುತ್ತದೆ. ಇದಲ್ಲದೇ, ಅಲ್ಟ್ರಾಸೌಂಡ್ ಪರೀಕ್ಷಾ, ವಿಧಾನದ ಮೂಲಕ ಫೈಬ್ರಾಯಿಡ್ ಗಡ್ಡೆಗಳ ಬೆಳವಣಿಗೆಯನ್ನು ಗುರುತಿಸಬಹುದು. ಹೊಟ್ಟೆಯ ಕೆಳಭಾಗದಲ್ಲಿ ಅಥವಾ ಯೋನಿಯ ಒಳಗಡೆ ಈ ಸಾಧನವನ್ನು ಇಟ್ಟು ಗರ್ಭಾಶಯದ ಚಲನಾತ್ಮಕ ಚಿತ್ರ ತೆಗೆಯಬಹುದು.

## ಚಿಕಿತ್ಸೆ

ಫೈಬ್ರಾಯಿಡ್ ಗಡ್ಡೆಗಳು ದೊಡ್ಡದಾದಾಗ ಶಸ್ತ್ರ ಚಿಕಿತ್ಸೆ ಒಂದೇ ಮಾರ್ಗ ಅನೇಕ ಸಂದರ್ಭದಲ್ಲಿ ಗಡ್ಡೆಗಳು ಮಿತಿ ಮೀರಿ ಬೆಳೆದಿದ್ದರೆ, ಗರ್ಭಕೋಶದ ಜೊತೆಗೆ ಗಡ್ಡೆಗಳನ್ನು ತೆಗೆಯುವುದು ವೈದ್ಯರಿಗೆ ಅನಿವಾರ್ಯ. ಕೆಲ ಸಂದರ್ಭದಲ್ಲಿ ಅತಿ ಚಿಕ್ಕವಯಸ್ಸಿನ ಮಹಿಳೆಯರು ಇನ್ನೂ ಮಕ್ಕಳನ್ನು ಪಡೆಯದೇ ಇದ್ದಲ್ಲಿ, ಗರ್ಭಕೋಶವನ್ನು ಉಳಿಸುವ ಪ್ರಯತ್ನ ಕೂಡಾ ಇಂದಿನ ಆಧುನಿಕ ವೈದ್ಯಕೀಯ ಚಿಕಿತ್ಸೆಗಳು ನೆರವು ಮಾಡುತ್ತಿವೆ. ಅವುಗಳಲ್ಲಿ ಮುಖ್ಯವಾಗಿದ್ದು ಮಯೆಮೆಕ್ಟಮಿ ಶಸ್ತ್ರ ಚಿಕಿತ್ಸೆ. ಇದರ ಮೂಲಕ ಗರ್ಭಕೋಶ ಉಳಿಸಿ ಮಹಿಳೆಯು ಶಸ್ತ್ರ ಚಿಕಿತ್ಸೆ ನಂತರವೂ ಮಗುವನ್ನು ಪಡೆಯಲು ಸಹಾಯಕ.

ಕೆಲವು ಸಲ ಗಡ್ಡೆಗಳು ಗರ್ಭಾಶಯದ ಒಳಗಿದ್ದಾಗ ಯೋನಿ ಮಾರ್ಗದ ಮೂಲಕ ಹಿಸ್ಟ್ರೀಪಿಸ್ಕೋಫಿ ಮಯೇಮೆಕ್ಟಮಿ ಚಿಕಿತ್ಸೆ ಮೂಲಕ ತೆಗೆಯಬಹುದು. ಅಕಸ್ಮಾತ್, ಗರ್ಭಕೋಶದ ಹೊರಭಾಗದಲ್ಲಿ ಗಡ್ಡೆಗಳು ಇದ್ದರೆ ಲ್ಯಾಪರೋಸ್ಕೋಪಿ ಮೆಯೇಮೆಕ್ಟಮಿ ಮೂಲಕ ತೆಗೆಯಬಹುದು. ಆದರೆ ರೋಗಿಗಳು ಕೆಲವು ಸಂಗತಿಗಳನ್ನು ನೆನಪಿಟ್ಟುಕೊಳ್ಳುವುದು ಮುಖ್ಯ. ಮಹಿಳೆ ಗರ್ಭಿಣಿ ಇದ್ದಾಗ ಫೈಬ್ರಾಯಿಡ್ ಗಡ್ಡೆಗಳು ಹೆಚ್ಚಾಗಿ ಬೆಳೆಯಬಹುದು. ಆದರೆ ಹೆದರುವ ಅಗತ್ಯ ಇಲ್ಲ. ವೈದ್ಯರನ್ನು ಸಂಪರ್ಕಿಸಿ ತಪಾಸಣೆ, ಚಿಕಿತ್ಸೆ ಪಡೆಯುವುದು ಒಳಿತು.




**ಡಾ. ರಮೇಶ್ ಆಸ್ಪತ್ರೆ**

No.6/63, 59ನೇ ಅಡ್ಡರಸ್ತೆ, 4ನೇ ಬ್ಲಾಕ್, ರಾಜಾಜಿನಗರ
ಎಂಟ್ರನ್ಸ್, ಎಂ.ಇ.ಐ. ಪಾಲಿಟೆಕ್ನಿಕ್ ಹತ್ತಿರ, ಬೆಂಗಳೂರು–10. ದೂ.ಸಂಖ್ಯೆ:080 23151873,
Mobile : 99000 31842 email : endoram2006@yahoo.in ,
www.laparoscopicsurgeries.com